# ಬಜಾರಿತನ ಈಗಲೂ ಕಾಡುತ್ತೆ

## ಆಶಾಲತಾ

ಝೀ ಕನ್ನಡದ 'ಕಮಲಿ'ಯ ಅಜ್ಜಿ



◆ **ಕಳ್ಳರ ಗ್ಯಾಂಗ್ ನಿರ್ವಹಣೆ ಹೇಗೆನಿಸುತ್ತದೆ?**

'ಕಮಲಿ' ಕಥೆ ಹೊಸ ಕವಲು ಒಡೆದಿದೆ. ನಮ್ಮದು ಒಂದು ಕಳ್ಳರ ತಂಡ. ನಮಗೆ ಕದ್ದ ವಸ್ತುಗಳ ಮುಖ ಬೆಲೆ ಗೊತ್ತಿರುವುದಿಲ್ಲ. ಎಷ್ಟೇ ಲಕ್ಷ ರೂಪಾಯಿ ಬೆಲೆ ಬಾಳುವ ವಸ್ತು ಕದ್ದರೂ ಒಂದೆರಡು ಸಾವಿರಕ್ಕೆ ಮಾರುತ್ತೇವೆ. ಹಸಿವು ನೀಗಿಸಿಕೊಳ್ಳಲು ಕಳ್ಳತನ ಮಾಡುವುದು ನಮ್ಮ ಕೆಲಸ. ಈ ಪಾತ್ರವನ್ನು ಸಿಕ್ಕಾಪಟ್ಟೆ ಎಂಜಾಯ್ ಮಾಡ್ತಾ ನಟಿಸುತ್ತಿದ್ದೇನೆ. ಇಂತಹ ಪಾತ್ರ ಸಿಗುವುದು ಅದೃಷ್ಟ ಎಂದೇ ಹೇಳಬೇಕು. 45 ವರ್ಷಗಳ ವೃತ್ತಿ ಜೀವನದಲ್ಲಿ ಹಲವು ಭಿನ್ನ ಪಾತ್ರಗಳನ್ನು ನಿರ್ವಹಿಸಿದ್ದೇನೆ. ಇದು ತುಂಬ ಸಹಜವಾಗಿ ವರ್ತಿಸುವ ಪಾತ್ರ. ಹೀಗೆ ಇರಬೇಕು, ಇದನ್ನೇ ಮಾಡಬೇಕು ಎಂದು ಈ ಪಾತ್ರ ಬಯಸುವುದಿಲ್ಲ. ತಮಾಷೆ ಇದೆ. ಪಾತ್ರ ತುಂಬ ಇಷ್ಟ ಆಯ್ತು.

◆ **ನಿಮ್ಮ ಬಣ್ಣದ ಬದುಕಿನ ಆರಂಭದ ದಿನಗಳು ಹೇಗಿದ್ದವು? ಈಗ ಹೇಗಿವೆ?**

1969ರಲ್ಲೇ ಸಿನಿಮಾಕ್ಕೆ ಪರಿಚಯ ಆದೆ. ನನ್ನ ಮೊದಲ ಸಿನಿಮಾ 'ಕೃಷ್ಣದೇವರಾಯ'. ಅದರಲ್ಲಿ ಚಿಕ್ಕ ಪಾತ್ರ ಮಾಡಿದೆ. ನಂತರ ಪೋಷಕ ಪಾತ್ರಗಳು ಹೆಚ್ಚು ನನಗೆ ಒಲಿದು ಬಂದಿವೆ. ಅದರಲ್ಲೂ ಬಜಾರಿ ಪಾತ್ರಗಳೇ ಹೆಚ್ಚು. ಬಜಾರಿ ಆಶಾಲತಾ ಎಂದು ಜನಜನಿತ. ಕಿರುತೆರೆಯಲ್ಲಿ 'ನಾಗಿಣಿ' 'ಜೋಕಾಲಿ'ಯಲ್ಲಿ ಪ್ರಮುಖ ಪಾತ್ರ ಮಾಡಿದೆ. ಚಿತ್ರ ನಿರ್ಮಾಣದಲ್ಲಿ ಮೊದಲಿನ ತಂತ್ರಕ್ಕೂ ಈಗಿನ ತಂತ್ರಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಜೊತೆಗೆ ತಾಂತ್ರಿಕ ಕ್ರಾಂತಿಯೂ ಆಗಿದೆ. ಜೊತೆಗೆ ಈಗ ವೈಯಕ್ತಿಕತೆ ಹೆಚ್ಚಿದೆ. ಮೊದಲು ಒಂದು ವಾಹನದಲ್ಲಿ ಎಲ್ಲರೂ ಬಂದು ಹೋಗುತ್ತಿದ್ದೆವು. ಊಟೋಪಚಾರವೂ ಒಟ್ಟೊಟ್ಟಿಗೆ ಆಗುತ್ತಿತ್ತು. ಈಗ ಬಹುತೇಕ ತಮ್ಮ ಖಾಸಗಿ ವಾಹನದಲ್ಲಿ ಬರುತ್ತಾರೆ. ಚಿತ್ರೀಕರಣದಲ್ಲಿ ಬಿಡುವು ಸಿಕ್ಕರೆ ಅವರ ಕಾರಿನಲ್ಲಿ ಹೋಗಿ ಕುಳಿತುಕೊಳ್ಳುತ್ತಾರೆ. ಒಡನಾಟದ ನೆಲೆಯಲ್ಲಿಯೂ ಒಂದಿಷ್ಟು ಬದಲಾವಣೆ ಆಗಿರುವುದನ್ನು ಕಂಡಿದ್ದೇನೆ.

ನಟನೆ– ಕಥೆಗೆ ಸಂಬಂಧಿಸಿದಂತೆ ಚರ್ಚೆ ಮಾಡ್ತಾ ಇದ್ದೆವು. ವೈಯಕ್ತಿಕವಾಗಿ ಕಷ್ಟ– ಸುಖ ಹಂಚಿಕೊಳ್ಳುತ್ತಿದ್ದೆವು. ಈಗ ಅದಿಲ್ಲ ಎಂದೆನಿಸುತ್ತದೆ. 'ಸಿಂಧೂರ ತಿಲಕ' ಸಿನಿಮಾ ಮಾಡುತ್ತಿದ್ದ ಸಂದರ್ಭ ನಾವೆಲ್ಲ ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದೆವು. ಆಂಧ್ರ ಮೂಲದ ನಿರ್ಮಾಪಕರು 'ನಮ್ಮಲ್ಲಿ ಪ್ರತ್ಯೇಕ ಬಾಕ್ಸ್‌ಗಳಲ್ಲಿ ಊಟ ತರಬೇಕು. ಇಲ್ಲಿ ನೀವೆಲ್ಲ ಒಂದೇ ಮನೆಯವರಂತೆ ಒಟ್ಟಿಗೆ ಕುಳಿತು ಊಟ ಮಾಡುವಂತೆ ಕಾಣಿಸುತ್ತದೆ' ಎಂದಿದ್ದರು. ಆ ನೆನಪು ಈಗಲೂ ಕಾಡುತ್ತದೆ.

◆ **ನೀವು ಏನಾಗಬೇಕಿತ್ತು ಎಂಬ ಕನಸಿತ್ತು?**

ತಾಯಿ ಗುಬ್ಬಿ ವೀರಣ್ಣ ವಂಶಸ್ಥರು. ಬಿ. ಜಯಶ್ರೀ ಅವರ ತಂಗಿ ನನ್ನಮ್ಮ. ನನ್ನ ತಾಯಿ ಕೂಡ ನಾಟಕದಲ್ಲಿ ಪಾತ್ರ ಮಾಡುತ್ತಿದ್ದರು. ನನ್ನ ತಂದೆ ಕಡೆಗೆ ರಾಜಕೀಯದ ಸಂಬಂಧ. ನನ್ನ ಅಪ್ಪ ಗೆಜ್ಜೆ ಮರುಳಪ್ಪ ಕಡೂರು ವಿಧಾನ ಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದರು. ಅವರಿಗೆ ನನ್ನ ಓದು ಮುಖ್ಯವಾಗಿತ್ತು. ವೈದ್ಯಳನ್ನಾಗಿ ಮಾಡಿಸಬೇಕು ಎಂದು ಅಂದಿನ ಕಾಲದಲ್ಲಿಯೇ ಪ್ರತಿಷ್ಠಿತ ರೆಸಿಡೆನ್ಸಿ ಶಾಲೆಯಲ್ಲಿ ನನ್ನನ್ನು ಓದಿಸುತ್ತಿದ್ದರು. ನಾನು ಇನ್ನೂ ಎಸ್ಸೆಸ್ಸೆಲ್ಸಿ ಮುಗಿಸಿರಲಿಲ್ಲ; ನನ್ನ ತಂದೆ ಅಕಾಲಿಕ ಮರಣವನ್ನಪ್ಪಿದರು. ಆಗ ನಮಗಿದ್ದ ಆರ್ಥಿಕ ಪರಿಸ್ಥಿತಿ ದುಡಿಯುವ ಅನಿವಾರ್ಯತೆಯನ್ನು ನಿರ್ಮಾಣ ಮಾಡಿತು. ಅಂದಿನಿಂದ ಇಂದಿನ ತನಕ ದುಡಿಯುತ್ತಿದ್ದೇನೆ.

ತಾಯಿಯ ಸಂಬಂಧಿಗಳೆಲ್ಲ ನಟರು. ತಂದೆಗೆ ಸಿನಿಮಾ ಇಷ್ಟ ಇರಲಿಲ್ಲ. ನನಗೂ ಸಿನಿಮಾದಲ್ಲಿ ಮಾಡಬೇಕು ಆಸೆ ಇತ್ತು. ನಮ್ಮ ಅಣ್ಣ (ದೊಡ್ಡಮ್ಮನ ಮಗ) 'ವೀರ ಮಹದೇವ' ಸಿನಿಮಾ ಮಾಡಿದರು. ಅದರಲ್ಲಿ ನನಗೊಂದು ಪುಟ್ಟ ಪಾತ್ರವನ್ನು ನೀಡಿದರು. ಅದೇ ಜೀವನದ ಭಾಗವಾಯಿತು. ನೃತ್ಯ– ಹಾಡು ಏನೂ ಬರ್ತಾ ಇರಲಿಲ್ಲ. ಬದುಕೇ ಇದಾಗಿದ್ದರಿಂದ ಎಲ್ಲ ಕಲಿಸಿತು. ಇದಕ್ಕೆಲ್ಲ ನನ್ನ ತಾಯಿ ಕಾರಣ.

◆ **ಸ್ಮರಣೀಯ ಪಾತ್ರಗಳ ಬಗ್ಗೆ ಹೇಳುವುದಾದರೆ**

'ತುಂಬಿದ ಮನೆ'ಯ ಪಾತ್ರ ಈಗಲೂ ಇಷ್ಟ ಆಗುತ್ತೆ. ಎಲ್ಲ ರೀತಿಯ ಪಾತ್ರಗಳನ್ನೂ ಮಾಡುತ್ತಿದ್ದೆ. ಜಾಸ್ತಿ ಬಜಾರಿಯೇ ಆಗಿದ್ದರಿಂದ ಅಯ್ಯೋ ನಾನು ಎಷ್ಟೆಲ್ಲ ಗೋಳು ಹೊಯ್ದುಕೊಂಡೆ ಎಂಬ ಸಂಗತಿ ಕಾಡುತ್ತದೆ. ಆಗ ನನ್ನ ಪಾತ್ರಗಳನ್ನು ಕಂಡು ಜನ ನನಗೆ ತಮಾಷೆ ಮಾಡ್ತಾ ಇದ್ದರು. 'ಪುಣ್ಯಕ್ಕೆ ನಿನಗೆ ಇಬ್ಬರೂ ಹೆಣ್ಣು ಮಕ್ಕಳು. ಗಂಡು ಮಕ್ಕಳಾಗಿದ್ದರೆ ನಿನ್ನ ಮಕ್ಕಳಿಗೆ ಯಾರೂ ಹೆಣ್ಣು ಕೊಡುತ್ತಿರಲಿಲ್ಲ' ಎನ್ನುತ್ತಿದ್ದರು. ಅದಕ್ಕೆ ನಾನು 'ಹೋಗ್ಲಿ ಬಿಡಿ ಬರುವ ಅಳಿಂದಿರಾದರೂ ಹೆದರಿಕೊಂಡು– ಬೆದರಿಕೊಂಡು ಇರ್ತಾರೆ' ಅಂತಿದ್ದೆ.

◆ **ರಂಗಭೂಮಿ, ಹಿರಿತೆರೆ, ಕಿರುತೆರೆಯ ಒಡಾಟ ಹೇಗೆ ಸಾಧ್ಯ ಆಯಿತು?**

ನನ್ನ ತಂದೆ ತೀರಿದ ಸಂದರ್ಭದಲ್ಲಿ ಒಂದು ನಾಟಕಕ್ಕೆ ಕರೆದರು. ಹುಬ್ಬಳ್ಳಿಯಲ್ಲಿ ನಾಟಕ ಇತ್ತು. ಅದನ್ನು ಹಂಸಲೇಖ ಮಾಡಿದ್ದರು. ಅದರ ಹೆಸರು 'ರೈತಜೀವಿ'. ನಾನೇ ನಾಯಕಿ, ಡಾನ್ಸ್ ಸಂದರ್ಭ ಬಂತು. ನನಗೆ ಡಾನ್ಸ್ ಗೊತ್ತಿಲ್ಲ. ಅದರ ಸಂಗೀತ ನಿರ್ದೇಶನವನ್ನೂ ಹಂಸಲೇಖ ಮಾಡಿದ್ದರು. ನೃತ್ಯ ಹೇಗೋ ಮಾಡಿದೆ. ಅಂದಿನ ಲೈಟ್– ಹೊಗೆ, ಮಿಣಿ ಮಿಣಿಯ ಬೆಳಕಿನ ವಾತಾವರಣವೇ ಹೊಸತು. ತಕ್ಷಣ ಹಂಸಲೇಖ 'ಯಾರಮ್ಮ ನೀನು? ಡಾನ್ಸ್ ಬರಲ್ಲ' ಎಂದು ಜೋರು ಮಾಡಿದ್ದರು. ಅದೇ ಅವರು 'ಮೊಮ್ಮಗ' ಸಿನಿಮಾ ನೋಡಿ ಬೆನ್ನು ತಟ್ಟಿದರು. ನನ್ನ ಬದುಕಿನಲ್ಲಿ ರಂಗಭೂಮಿ, ಸಿನಿಮಾ, ಕಿರುತೆರೆ ಒಂದಲ್ಲ ಒಂದು ಕೈಹಿಡಿದು ಅನ್ನದ ಮಾರ್ಗದತ್ತ ಮುನ್ನಡೆಸಿವೆ.

■ **ರಾಘವೇಂದ್ರ ಕೆ.**